# ಕರ್ನಾಟಕ ಸರ್ಕಾರ

ಡಿಟಿಇ 76 ಮಾಹಕಾ 2016

ನಿರ್ದೇಶಕರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 1-3-2017

## ಜ್ಞಾಪನ

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಮಾಹಿತಿ ಕೋರಿ ಸಲ್ಲಿಸುವ ಅರ್ಜಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿಯವರು ಸರಿಯಾದ ಮಾಹಿತಿಯನ್ನು ಒದಗಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಗಮನಕ್ಕೆ ತಿಳಿಯಬಯಸುವುದೇನೆಂದರೆ, ಸಾರ್ವಜನಿಕರು ಮಾಹಿತಿ ಕೋರಿ ಸಲ್ಲಿಸುವ ಅರ್ಜಿಯನ್ನು ಪರಿಶೀಲಿಸಿ ಸರಿಯಾದ ಮಾಹಿತಿಯನ್ನು ಮಾತ್ರ ಒದಗಿಸುವಂತೆ ತಿಳಿಸಿದೆ ಹಾಗೂ ಯಾವುದೇ ಕಾರಣಕ್ಕೂ ತಪ್ಪು ಮಾಹಿತಿ ನೀಡಬಾರದಾಗಿ ಎಚ್ಚರಿಸಿದೆ. ಅಲ್ಲದೇ ಅರ್ಜಿದಾರರು ಕೋರಿರುವ ಮಾಹಿತಿಯು ಮೂರನೇ ವ್ಯಕ್ತಿಗೆ ಸಂಬಂಧಿಸಿದಲ್ಲಿ **ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ(11)** ರ ಅನ್ವಯ ಮೂರನೇ ವ್ಯಕ್ತಿಗೆ ನಿಗದಿತ ಅವಧಿಯೊಳಗೆ ನೋಟೀಸ್ ನೀಡಿ ಮಾಹಿತಿಯನ್ನು ಬಹಿರಂಗ ಪಡಿಸಬೇಕೆ ಅಥವಾ ಇಲ್ಲವೆ ಎಂಬ ಬಗ್ಗೆ ಲಿಖಿತ ಹೇಳಿಕೆಯನ್ನು ಪಡೆದು ನಂತರ ಅರ್ಜಿದಾರರಿಗೆ ಮಾಹಿತಿ/ಹಿಂಬರಹವನ್ನು ನೀಡುವಂತೆ ತಿಳಿಸಿದೆ, ಅರ್ಜಿದಾರರು ಕೋರಿರುವ ಮಾಹಿತಿಯು ಲಭ್ಯವಿಲ್ಲದಿದ್ದಲ್ಲಿ, ಮಾಹಿತಿಯು ಲಭ್ಯವಿಲ್ಲವೆಂದು ಅರ್ಜಿದಾರರಿಗೆ ತಿಳಿಸುವಂತೆ ಈ ಮೂಲಕ ಸೂಚಿಸಿದೆ. ಅಲ್ಲದೇ, **ಮಾಹಿತಿ ಹಕ್ಕು ಕಾಯ್ದೆ ಕಲಂ 4(1)(ಎ)** ಅನ್ವಯ ಕಡತಗಳ ಅನುಕ್ರಮಣಿಕೆ/ಪಟ್ಟಿಯನ್ನು ಪ್ರತಿ ಶಾಖೆಯಲ್ಲೂ **ಮಾರ್ಚ್ 15, 2017** ರ ಒಳಗಾಗಿ ತಯಾರಿಸಿ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು

**ಇವರಿಗೆ:**

1. ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು-ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು
2. ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಎಲ್ಲಾ ಸರ್ಕಾರಿ/ ಅನುದಾನಿತ/ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್/ಕಿರಿಯ ತಾಂತ್ರಿಕ ಶಾಲೆಗಳು

ಪ್ರತಿ:
ಇ- ಆಡಳಿತ